# ಭುವನ

ಡಾ. ಎಸ್.ಹೆಚ್. ಭುವನೇಶ್ವರ ಅಭಿನಂದನಾ ಗ್ರಂಥ





ಪ್ರಧಾನ ಸಂಪಾದಕರು:

ಡಾ. ಮುನಿರಾಜಪ್ಪ



Scanned by CamScanner

## ಡಾ. ಎಸ್.ಹೆಚ್. ಭುವನೇಶ್ವರ ಅಭಿನಂದನಾ ಸಮಿತಿ

ಅಧ್ಯಕ್ಷರು

ಡಾ. ಮುನಿರಾಜಪ್ಪ

ಸಮಿತಿ ಸದಸ್ಯರು

ಡಾ. ಕೆ. ಕೃಷ್ಣಪ್ಪ

ಡಾ. ಸುಬ್ರಮಣ್ಯಸ್ವಾಮಿ

ಆರ್. ವಾದಿರಾಜ್

ಎಸ್.ಜಿ. ನಾರಾಯಣಸ್ವಾಮಿ

ಎಂ. ಲೋಕೇಶ್

ಷಣ್ಮುಖ್ ಪಟೇಲ್ .ಸಿ.ಜಿ.

ಸಂಚಾಲಕರು

ಡಾ. ಆರ್. ಜ್ಯೋತಿಲಿಂಗಯ್ಯ

ಸಹಕಾರ

ರೂರಲ್ ಕಾಲೇಜು ಹಿರಿಯ ವಿದ್ಯಾರ್ಥಿಗಳ ಸಂಘ, ಕನಕಪುರ

ಮತ್ತು

ಡಾ. ಎಸ್.ಹೆಚ್. ಭುವನೇಶ್ವರ ಶಿಷ್ಯ ಬಳಗ, ಬೆಂಗಳೂರು

Scanned by CamScanner

# ಜ್ಯೋತಿಷ್ಯ, ಆಧ್ಯಾತ್ಮ ಮತ್ತು ಧಾರ್ಮಿಕ ಕಾರ್ಯಕ್ರಮಗಳ ಸ್ವರೂಪ

– ಪ್ರೊ. ನಾರಾಯಣಸ್ವಾಮಿ .ಎಸ್.ಜಿ, ಬೆಂಗಳೂರು

ಆಧುನಿಕ ಜಗತ್ತಿನಲ್ಲಿ ಜನಸಾಮಾನ್ಯರು ಜ್ಯೋತಿಷ್ಯ ಶಾಸ್ತ್ರದ ಬಗ್ಗೆ ಒಲವು ಕಡಿಮೆಯಾಗದಿರುವುದು ಇಂದಿಗೂ ಹೆಚ್ಚು ಪ್ರಾಶಸ್ತ್ಯ ಪಡೆದುಕೊಂಡಿದೆ. ವಿಚಾರವಾದಿಗಳು, ನಾಸ್ತಿಕರು, ಪ್ರಗತಿಚಿಂತಕರು, ಸಮಾಜವಾದಿ ಧೋರಣೆಯುಳ್ಳವರ ನಡುವೆಯೂ ಜ್ಯೋತಿಷ್ಯ ಶಾಸ್ತ್ರದ ನಂಬಿಕೆ ಎಲ್ಲಾ ವರ್ಗದ ಜನರಲ್ಲೂ ಚಲನಶೀಲವಾಗಿಯೇ ಇದೆ. ಮನುಷ್ಯನ ದಿನನಿತ್ಯ ಬದುಕಿನ ಬವಣೆ ಸುಖ, ನೆಮ್ಮದಿ, ಲಾಭ, ನಷ್ಟ ಇತರೆ ಜೀವನ ಕ್ರಮದ ಮೇಲೆ ಜ್ಯೋತಿಷ್ಯ ನಿರ್ಧಾರವಾಗುತ್ತದೆ ಎಂಬುದು ಸಾಮಾನ್ಯ ತಿಳುವಳಿಕೆ ಆತನಲ್ಲಿ ಬೇರೂರಿದೆ. ಪುರಾತನ ಕಾಲದಿಂದಲೂ ಜ್ಯೋತಿಷ್ಯದ ಬಗ್ಗೆ ಸಾಮಾನ್ಯರು, ರಾಜರು, ಮೇಲ್ವರ್ಗದ ಜನರು ನಂಬಿಕೆ ಇಟ್ಟುಕೊಂಡಿದ್ದಾರೆ. ರಾಜರ ಪಟ್ಟಾಭಿಷೇಕ, ಪುತ್ರ ಜನನ, ವಿವಾಹ, ಯುದ್ಧ ಸಂದರ್ಭ, ಅಶ್ವಮೇಧಯಾಗ ಇಂತಹ ಸಂದರ್ಭಗಳಲ್ಲಿ ಜ್ಯೋತಿಷ್ಯ ಶಾಸ್ತ್ರದ ನಂಬಿಕೆಯ ಆಧಾರದಲ್ಲಿ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಜ್ಯೋತಿಷ್ಯ ಶಾಸ್ತ್ರದ ಆಧಾರದಲ್ಲಿಯೇ ಮನುಷ್ಯ ಹಣೆಬರಹ ನಿರ್ಧರಿತವಾಗುತ್ತದೆ ಎಂದು ಪರಂಪರಾಗತವಾಗಿ ನಂಬಿಕೆ ಉಳಿಸಿಕೊಂಡು ಬಂದಿರುವುದು ಕಾಣಬಹುದಾಗಿದೆ.

ಈಗಿನ ವೈಜ್ಞಾನಿಕ ಯುಗದಲ್ಲಿ ಮನುಷ್ಯ ಅಪರಿಮಿತವಾದ ಅನ್ವೇಷಣೆ ಸಾಧನೆ ಮಾಡಿದ್ದರು, ದೇವರ ಮೇಲಿನ ನಂಬಿಕೆ, ಪವಾಡ, ಮಾಟಮಂತ್ರ, ದೇವರ ಇರುವ ಬಗ್ಗೆ ತನ್ನ ಗ್ರಹಚಾರಗಳ ಬಗ್ಗೆ ಪಾಪಕರ್ಮಗಳು, ಸಂತಾನ ಪ್ರಾಪ್ತಿ, ಮದುವೆ, ಉದ್ಯೋಗ, ಸಂಪತ್ತು ಗಳಿಕೆ, ಮನೆ ಕಟ್ಟುವುದು, ಆರೋಗ್ಯ ಹಲವಾರು ಜೀವನಕ್ರಮದ

Scanned by CamScanner